ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರಿಗೆ ಪರಿಹಾರ ಕೊಡುವುದಕ್ಕೋಸ್ಕರವೇ ತಾರೀಖು 13-1-1970ರಲ್ಲಿಯೇ ಎಗ್ಸಿಕ್ಯುಟಿವ್ ಇಂಜನಿಯರ್ ಅವರಿಗೆ ಪತ್ರ ವ್ಯವಹಾರ ಮಾಡರಾಗಿದೆ. ಮತ್ತು ಆಕ್ಸಿಸಿಷನ್ ಆಫೀನರಿಗೂ ಕಾಗದ ಬರೆದಿದ್ದೇವೆ. ಇದುವರೆಗೆ 2-3 ಸಾರಿ ವಿವರಣೆಗಳನ್ನು ಕೇಳಿ ಕ ಗದ ಕಳುಹಿಸಿದ್ದರೂ ಇನ್ನು ಉತ್ತರ ಬಂದಿಲ್ಲ. ನಿಧಾನವಾಗಿದೆ, ನರಸಾಪುರದ ಕೆರೆಯ ಮುಳುಗಡೆಯಾದ ಜಮೀನಿನ ಬಗ್ಗೆ ಇಲ್ಲಿಯವರೆಗೂ ಆಕ್ಸಿಸಿಷನ್ ಆಗಬೇಕೆಂದು ಇಂಜನಿಯರಿಂಗ್ ಡಿಪಾರ್ಟ್‌ಮೆಂಟ್‌ನವರು ರೆವಿನ್ಯೂ ಇಲಾಖೆಗೆ ಇನ್ನೂ ತಿಳಿಸಿಲ್ಲ. ಆದ್ದರಿಂದ ನಿಧಾನವಾಗಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮುಳುಗಡೆಯಾದ ಜಮೀನನ್ನು ನಿಮ್ಮ ವಶಕ್ಕೆ ತೆಗೆದುಕೊಂಡ ಮೇಲೆ ಪರಿಹಾರ ಕೊಡುವುದಕ್ಕೆ ಒಂದು ಗೊತ್ತಾದ ಕಾಲವನ್ನು ಗೊತ್ತು ಮಾಡಿ ಜಾಗ್ರತೆಯಾಗಿ ಪರಿಹಾರ ಕೊಡುವ ಹಾಗೆ ವ್ಯವಸ್ಥೆಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರಿಗೆ ಪರಿಹಾರವನ್ನು ಆದಷ್ಟು ಬೇಗನೆ ಕೊಡ ಬೇಕೆಂಬುದೇ ಸರಕಾರದ ಅಭಿಪ್ರಾಯ. ಆದರೆ ಲ್ಯಾಂಡ್ ಆಕ್ಸಿಸಿಷನ್ ಆಫೀನರ್ ಕೈಯಲ್ಲಿಯೇ ಪೂರಾ ಅಧಿಕಾರ ಇರುವುದಿಲ್ಲ. ಕೆಲವು ವೇಳೆ ಕೆರೆಗಳ ಬಗ್ಗೆ, ರಸ್ತೆಗಳ ಬಗ್ಗೆ ರೋಕೋಪಯೋಗಿ ಇಲಾಖೆಗೆ ಬರೆದು ಅವರಿಂದ ಎಷ್ಟು ಭೂಮಿಬೇಕು ಎಂಬುದನ್ನು ವಿಚಾರಮಾಡಬೇಕಾಗಿ ಬರುತ್ತದೆ. ಬೆರೆಯ ವಿಷಯದಲ್ಲಿ ನಮ್ಮ ರೆವಿನ್ಯೂ ಆಫೀಸರು ನಿಷ್ಕರ್ಷೆ ಮಾಡುತ್ತಾರೆ. ಎಷ್ಟು ಪ್ರದೇಶ ಆಕ್ವೈರ್ ಮಾಡಿಕೊಳ್ಳಬೇಕೆಂಬುದು ಇನ್ನೂ ಮುಂಜೂರಾಗಬೇಕು. ಅನಂತರ ಅವಾರ್ಡ್ ಎಷ್ಟು ಕೊಡಬೇಕೆಂಬುದು ನಿಗದಿ ಮಾಡಬೇಕಾಗುತ್ತದೆ. ಅದಕ್ಕಾಗಿ ನಿಧಾನವಾಗಿದೆ. ಆದಷ್ಟು ಬೇಗ ಸರ ಕಾರದವರು ಈ ವಿಚಾರವನ್ನು ತೀರ್ಮಾನ ಮಾಡಬೇಕೆಂದು ಸದಸ್ಯರ ಸಲಹೆಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಲಾಗಿದೆ.

Sri DODDA THIMMAIAH.—Is it the policy of the Government to allot lands to those whose lands were submerged for construction of tanks and other things and whether it is a fact that even though the policy of the Government is to allot lands to those whose lands are submerged they are not allotted lands ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಜಮೀನು ಕಳೆದುಕೊಂಡವರಿಗೆ ಪರಿಹಾರ ದ್ರವ್ಯ ಕೊಡ ಬೇಕೆಂದು ಇದೆ. ಆದರೆ ಜಮೀನಿನ ಜೊತೆಯಲ್ಲಿ ಅದನ್ನು ಸಹ ಕೊಡಬೇಕೆಂದು ನಿರ್ದಿಷ್ಟವಾಗಿ ಏನೂ ಇಲ್ಲ. ಕೆಲವು ಸಂದರ್ಭಗಳಲ್ಲಿ ಆ ರೀತಿಯಾಗಿ ಕೊಡುವುದು ಸರ್ಕಾರದ ನೀತಿಯಾಗಿದೆ. ಅದು ಯಾವ ರೀತಿಯಾಗಿ ಕೊಡಬೇಕೆಂಬ ಬಗ್ಗೆ ಈ ವಿಚಾರಕ್ಕೆ ಸಂಬಂಧಪಟ್ಟ ಹಾಗೆ ವಿವರಗಳು ಈಗ ನನ್ನಲ್ಲಿಲ್ಲ.

ಅಧ್ಯಕ್ಷರು.—ಶ್ರೀ ನಾಗಣ್ಣನವರು ಪ್ರಶ್ನೆ ನಂ. 202 ಕೇಳಬಹುದು.

Students Agitation against Enhancement of Tuition fees by Private Colleges

202. Sri K. M. NAGANNA (Chickpet) [On behalf of SRI B. B. SAYANAK (Belgaum)].—

Will the Minister for Education be pleased to state.—

(*a*) whether the private colleges affiliated to the Karnataka University have enhanced the tuition fees more than hundred rupees from the year 1972-73 ;

(*b*) whether there was agitation by the students against this enhanncement of tuition fees in private Colleges ;

(*c*) whether it is a fact that the Karnataka University has passed a resolution to maintain *status-quo* in fee structure in private colleges ;

† Indicates that the remarks or speechs have not been revised by the member concerned

(*d*) if so, the number of private colleges which have reduced the tuition fees ;

(*e*) if not; the action the Government has taken against those colleges ;

(*f*) whether the Government would take over such private colleges which have not maintained the *stauts-quo* in tuition fees?

Sri A. R. BADARINARAYANA(Minister for Education).—

(*a*) There has been enhancement of tuition fees by the private colleges affiliated to the Karnataka University. But in no case has the enhancement been more than Rs. 100 from the fee rates of the previous year.

(*b*) Yes.

(*c*) Yes. But subsequently the implementation of the resolution was suspended by the Vice-Chancellor on receipt of a representation under Ordinance 65 read with Section 30, sub-section 6 of the Karnataka Universily Act, pending consideration of the fee issue by the Senate.

(*d*) No college has reduced tuition fee in view of the holding in abeyance the operat on of the Syndicate Resolution as mentioned above.

(*e*) Does not arise in view of replies to clauses (*c*) and (*d*).

(*f*) Does not arise in view of replies to clauses (*c*) and (*d*).

ಶ್ರೀ ಕೆ. ಎಂ. ನಾಗಣ್ಣ.—ಈ ನಿರ್ಣಯ ಯಾವಾಗ ಆಯಿತು ? ಇದರ ಬಗ್ಗೆ ನನಗೆ ಅಂಕಿ ಅಂಶಗಳನ್ನು ಒದಗಿಸುತ್ತೀರಾ ?

† Sri A. R. BADARINARAYANA.—At its meeting held on 12th December 1972 another resolution was passed to reduce the fees.

ಶ್ರೀ ಕೆ. ಎಂ. ನಾಗಣ್ಣ —ಮನವಿಗಳು ತಮಗೆ ಯಾವಾಗ ಬಂದವು? ಆರ್ಡಿನೆನ್ಸ್ ಏನು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ.—ಅದು ನಮಗೆ ಬರಲಿಲ್ಲ. ಯೂನಿವರ್ಸಿಟಿಗೆ ಬಂತು. ಯೂನಿವರ್ಸಿಟಿಯವರು ಅದನ್ನು ಸಸ್‌ಪೆಂಡ್ ಮಾಡಿದರು.

ಶ್ರೀ ಕೆ. ಎಂ. ನಾಗಣ್ಣ.—ಯೂನಿವರ್ಸಿಟಿಯವರು ಅದನ್ನು ಯಾವಾಗ ಸಸ್‌ಪೆಂಡ್ ಮಾಡಿದರು ?

ಶ್ರೀ ಎ.ಆರ್. ಬದರಿನಾರಾಯಣ.—ಶೇಕಡ 50ರಷ್ಟಕ್ಕಿಂತ ಸೆನೇಟ್‌ನಲ್ಲಿ ಒಂದು ನಿರ್ಣಯಕ್ಕೆ ಬೆಂಬಲ ದೊರಕಿದರೆ, ಆಗ ಇಂಥಾದ್ದನ್ನು ಸಸ್‌ಪೆಂಡ್ ಮಾಡುವುದಕ್ಕೆ ಅವರಿಗೆ ಅವಕಾಶ ಇದೆ. ರೂಲ್ಸ್ ಪ್ರಕಾರ ಅದನ್ನು ಸಸ್‌ಪೆಂಡ್ ಮಾಡಿದ್ದಾರೆ. ಅದು ಯಾವ ತಾರೀಖು ಎಂಬುದು ನನಗೆ ನೆನಪಿಲ್ಲ.